## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 200 |
| ಸದಸ್ಯರ ಹೆಸರು | ಮಾನ್ಯ ಶ್ರೀ ಎನ್. ರವಿಕುಮಾರ್ |
| ಉತ್ತರಿಸುವ ದಿನಾಂಕ: | 11.07.2018 |
| ಉತ್ತರಿಸುವ ಸಚಿವರು: | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಮುಜರಾಯಿ ದೇವಸ್ಥಾನಗಳಿಂದ ಬರುವ ಆದಾಯವನ್ನು ಆ ದೇವಸ್ಥಾನದ ಹತ್ತಿರದಲ್ಲಿರುವ ಕಡಿಮೆ ಆದಾಯವಿರುವ ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳಿಗೆ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ರಾಜ್ಯದ ಮುಜರಾಯಿ ದೇವಸ್ಥಾನಗಳಿಂದ ಬರುವ ಆದಾಯವನ್ನು ಆ ದೇವಸ್ಥಾನದ ಹತ್ತಿರದಲ್ಲಿರುವ ಕಡಿಮೆ ಆದಾಯವಿರುವ ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳಿಗೆ ನೇರವಾಗಿ ನೀಡಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997ರಡಿಯಲ್ಲಿ ಅವಕಾಶವಿರುವುದಿಲ್ಲ.<br>ಆದರೆ ಸದರಿ ಕಾಯ್ದೆಯ ಕಲಂ 21 (ಎಫ್) ರಲ್ಲಿ ಆರ್ಥಿಕವಾಗಿ ಸದೃಢವಾಗಿರುವ ಮುಜರಾಯಿ ಸಂಸ್ಥೆಗಳಿಂದ ಕಡಿಮೆ ಆದಾಯ ಇರುವ ಅಂದರೆ ವಾರ್ಷಿಕವಾಗಿ ರೂ.2.00ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ಅಧಿಸೂಚಿತ 'ಸಿ' ಪ್ರವರ್ಗದ ಸಂಸ್ಥೆಗಳನ್ನು ರಾಜ್ಯ ಧಾರ್ಮಿಕ ಪರಿಷತ್ತಿನ ಪೂರ್ವಾನುಮೋದನೆಯೊಂದಿಗೆ ದತ್ತು ತೆಗೆದುಕೊಂಡು ಅಭಿವೃದ್ಧಿ ಪಡಿಸಲು ಅವಕಾಶವಿರುತ್ತದೆ. ಅದರಂತೆ ಕ್ರಮ ವಹಿಸಲಾಗುತ್ತಿದೆ.<br>ಅಲ್ಲದೆ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳಿಂದ ನಿವ್ವಳ ಆದಾಯದಲ್ಲಿ ಸಾಮಾನ್ಯ ಸಂಗ್ರಹಣಾ ನಿಧಿಯನ್ನು ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ನಿಧಿಯನ್ನು ಆದಾಯ ಕಡಿಮೆ ಇರುವ ಅಥವಾ ಅಗತ್ಯ ಸಂದರ್ಭದಲ್ಲಿರುವ ಇತರೆ ಯಾವುದೇ ಧಾರ್ಮಿಕ ಸಂಸ್ಥೆಗೆ ಸಹಾಯ ನೀಡಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 19(1)(ಎ) ರನ್ವಯ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಕ್ರಮ ವಹಿಸಲಾಗುತ್ತಿದೆ |
| ಆ | ರಾಜ್ಯದ ಮುಜರಾಯಿ ದೇವಸ್ಥಾನಗಳಲ್ಲಿರುವ ಅರ್ಚಕರಿಗೆ ನೀಡುತ್ತಿರುವ ವೇತನವೆಷ್ಟು; ಅದನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮ. | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ -1997 ಮತ್ತು ನಿಯಮಗಳು 2002ರ ನಿಯಮ 8(2)(i)ರ ಕೋಷ್ಟಕದಲ್ಲಿ ಅರ್ಚಕರುಗಳಿಗೆ "ಉಪಲಬ್ಧಗಳನ್ನು" |

..2

| | | |
|---|---|---|
| | ಕೈಗೊಂಡಿದೆ; ಅರ್ಚಕರನ್ನು ಖಾಯಂ ನೌಕರರೆಂದು ಪರಿಗಣಿಸಲಾಗಿದೆಯೇ; ಅರ್ಚಕರಿಗೆ ಪಿಂಚಣಿ ಮತ್ತು ಇತರ ನಿವೃತ್ತಿ ವೇತನ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ; | ಅಧಿಸೂಚಿತ ಸಂಸ್ಥೆ/ಘೋಷಿತ ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯು ನಿಯಮಿಸಲಾದ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ಅರ್ಚಕರು ಸ್ವೀಕರಿಸುವ ತಟ್ಟೆಕಾಸು ಮತ್ತು ಸೇವಾ ರುಸುಂನ್ನು ಗಮನದಲ್ಲಿರಿಸಿಕೊಂಡು ನಿರ್ಧರಿಸತಕ್ಕದ್ದು" ಎಂದಿರುತ್ತದೆ. ಅದರಂತೆ ದೇವಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಚಕರಿಗೆ ಆಯಾಯ ದೇವಾಲಯದ ಆದಾಯಕ್ಕನುಗುಣವಾಗಿ ವೇತನ ನೀಡಲಾಗುತ್ತಿದೆ. ಇದಲ್ಲದೆ ದೇವಾಲಯಗಳಲ್ಲಿ ನಡೆಯುವ ವಿವಿಧ ಸೇವೆಗಳಲ್ಲಿ ಸೇವಾ ರುಸುಂ ಹಾಗೂ ತಟ್ಟೆಕಾಸು ಪಡೆಯುತ್ತಿರುತ್ತಾರೆ.<br><br>ಅರ್ಚಕರಿಗೆ ಪಿಂಚಣಿ ನೀಡಲು ಅವಕಾಶವಿರುವುದಿಲ್ಲ. ಆದರೆ ಕಾಯ್ದೆಯ ನಿಯಮ 16ರ ಪ್ರಕಾರ ಅರ್ಚಕರಿಗೆ ಆರ್ಥಿಕವಾಗಿ ಸದೃಢವಾಗಿರುವ ದೇವಾಲಯಗಳಲ್ಲಿ ಸೇವಾಂತ ಪ್ರಯೋಜನ ವ್ಯವಸ್ಥೆ ಕಲ್ಪಿಸಲಾಗಿದೆ. |
| ಇ | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಮತ್ತು ಭಕ್ತರ ಅನುಕೂಲಕ್ಕಾಗಿ ಸರ್ಕಾರವು ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ; ಈ ದೇವಸ್ಥಾನದ ವಾರ್ಷಿಕ ಆದಾಯವೆಷ್ಟು; ಇದರಲ್ಲಿ ಈ ದೇವಸ್ಥಾನದ ಅಭಿವೃದ್ಧಿಗೆ ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗುತ್ತಿದೆ? | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಭಕ್ತಾಧಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಮಗ್ರ ಅಭಿವೃದ್ಧಿಗಾಗಿ ಮಹಾನಕ್ಷೆಯನ್ನು ತಯಾರಿಸಿ, ಅದರಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br>ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.<br>ಈ ದೇವಾಲಯದ 2017-18ರ ಸಾಲಿನಲ್ಲಿ ಆದಾಯ **ರೂ.95,92,54,363.13/-**ಗಳಾಗಿರುತ್ತದೆ.<br>ದೇವಾಲಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ತಯಾರಿಸಲಾಗಿರುವ ಮಹಾನಕ್ಷೆಯಂತೆ ದೇವಾಲಯದ ಆದಾಯದಿಂದ, ಈವರೆಗೆ ರೂ.59,34,24,283/- ಗಳನ್ನು ವೆಚ್ಚ ಮಾಡಲಾಗಿದೆ. |

(ಸಂಖ್ಯೆ:ಕಂಇ 105 ಮುಸಪ್ರ 2018)

(ರಾಜಶೇಖರ ಬಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು

# ಅನುಬಂಧ

ಸರಕಾರದಿಂದ ಮಂಜೂರಾದ ಮಹಾನಕ್ಷೆಯ ಪ್ರಕಾರ ಅನುಮೋದಿತ ರೇಖಾ ಅಂದಾಜುಪಟ್ಟಿ ₹. 180.00ಕೋಟಿಯಲ್ಲಿ ಪ್ರಥಮ ಹಂತದ ₹. 60.00ಕೋಟಿಯ ಕಾಮಗಾರಿಗಳು ಹಾಗೂ ಪೂರಕ ಕಾಮಗಾರಿಗಳು ಈ ಕೆಳಗಿನಂತಿದೆ.

| ಕ್ರ ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (₹.ಗಳಲ್ಲಿ) | ಷರಾ |
|---|---|---|---|
| 1 | ಜನರಲ್ ಡಾರ್ಮಿಟರಿ ಕಟ್ಟಡ | 644.88 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 2 | ಸರ್ಪಸಂಸ್ಕಾರ ಯಾಗಶಾಲೆ | 227.57 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 3 | ಸರ್ಪಸಂಸ್ಕಾರ ಭಕ್ತಾದಿಗಳಿಗೆ ಡೈನಿಂಗ್ ಹಾಲ್ ಕಟ್ಟಡ | 679.77 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 4 | ಪ್ರತ್ಯೇಕ ಡಾರ್ಮಿಟರಿ ಕಟ್ಟಡ | 694.65 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 5 | ವಿ.ವಿ.ಐ.ಪಿ. ಅತಿಥಿಗೃಹ ಕಟ್ಟಡ | 562.08 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 6 | ವಿ.ಐ.ಪಿ. ಅತಿಥಿಗೃಹ ಕಟ್ಟಡ | 2,101.91 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 7 | ನೌಕರರ ವಸತಿಗೃಹ | 192.75 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 8 | ಟಾಯ್ಲೆಟ್ ಬ್ಲಾಕ್ – 1 ಸಂಖ್ಯೆ | 53.73 ಲಕ್ಷ | 1 ಕಟ್ಟಡದ ಕೆಲಸ ಪೂರ್ಣಗೊಂಡಿದೆ. |
| 9 | ವಾಹನಗಳ ಪಾರ್ಕಿಂಗ್ ಸ್ಥಳ – 2 | 301.89 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| **ಪ್ರಥಮ ಹಂತದ ಕಾಮಗಾರಿಗಳ ಪೂರಕ ಕೆಲಸಗಳು** | | | |
| 1 | Supplying and Providing Furniture to General Dormitory | 83,61,856.00 | ಕೆಲಸ ಪೂರ್ಣಗೊಂಡಿದೆ. |
| 2 | Providing and fixing of Furniture for VVIP Guest House | 86,42,235.00 | ಕೆಲಸ ಪೂರ್ಣಗೊಂಡಿದೆ. |
| 3 | Supplying and providing furniture to Separate Dormitory | 58,69,322.00 | ಕೆಲಸ ಪೂರ್ಣಗೊಂಡಿದೆ. |
| 4 | Quotation for Supplying Sheet Channel and Aluminum Beading for fixing the Poly Carbonate Sheets for VVIP Guest House | 8.75 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 5 | Construction of Temporary approach road to VIP Guest House | 11.00 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 6 | Construction of Lift Shaft to Dining Hall | 15.70 ಲಕ್ಷ | ಕೆಲಸ ಪೂರ್ಣಗೊಂಡಿದೆ. |
| 7 | Supplying and Providing Furniture to VIP Guest house | - | |
| 8 | ಮಾಸ್ಟರ್ ಪ್ಲಾನ್ ಯೋಜನೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರ್ವೆ ಕಾರ್ಯ, ಪತ್ರಿಕಾ ಪ್ರಕಟಣೆ, ಸ್ಟ್ರಕ್ಚರಲ್ ಡಿಸೈನ್, ಖಾಸಗೀ ತಾಂತ್ರಿಕ ಸಲಹಾ ಸಂಸ್ಥೆಗಳ ಸೇವೆ, ಕಛೇರಿ ನಿರ್ವಹಣೆ ಇತ್ಯಾದಿ ಸಾದಿಲ್ವಾರು ವೆಚ್ಚ. | 69,52,870.00 | |
| | **TOTAL:** | **59,34,24,283.00** | |

ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ಮೇಲಿನಂತೆ ₹. 60.00ಕೋಟಿಯ ಪ್ರಥಮ ಹಂತದ ಕಾಮಗಾರಿಗಳಲ್ಲಿ ₹. 58,64,71,413.00 ವೆಚ್ಚವಾಗಿದ್ದು, ಎರಡನೇ ಮತ್ತು ಮೂರನೇ ಹಂತದ ₹. 120.00ಕೋಟಿ ವೆಚ್ಚದಲ್ಲಿ ಶ್ರೀ ದೇವಳದ ನಿಧಿಯಿಂದ ಕೈಗೆತ್ತಿಕೊಳ್ಳಲು ಉದ್ದೇಶಿಸಿದ ಕಾಮಗಾರಿಗಳು ಈ ಕೆಳಗಿನಂತಿದೆ.

| | | | | |
|---|---|---|---|---|
| 1. | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದ ವತಿಯಿಂದ ಕೈಗೊಂಡಿರುವ ಮಾಸ್ಟರ್ ಪ್ಲಾನ್ ಯೋಜನೆಯ ಎರಡನೇ ಹಂತದಲ್ಲಿ ಬರುವ ರಸ್ತೆಗಳಿಗಾಗಿ ಅವಶ್ಯವಿರುವ ಜಮೀನುಗಳನ್ನು ಸ್ವಾಧೀನಪಡಿಸಲು ಪರಿಹಾರ ಮೊತ್ತವನ್ನು ಠೇವಣಿ ಮಾಡಿರುವುದಕ್ಕೆ ಅನುಮೋದನೆ. | | 5,85,29,844.00<br>12,72,49,093.00<br>**18,57,78,937.00** | ಮೊತ್ತವನ್ನು ಭೂಸ್ವಾಧೀನಾಧಿಕಾರಿಯವರ ಕಛೇರಿಯಲ್ಲಿ ಠೇವಣೀಕರಿಸಲಾಗಿದೆ. |
| 2. | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದ ವತಿಯಿಂದ ಕೈಗೊಂಡಿರುವ ಮಾಸ್ಟರ್ ಪ್ಲಾನ್ ಯೋಜನೆಯ ಎರಡನೇ ಹಂತದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳು. | | 6,860.00 ಲಕ್ಷ | ಕಾಮಗಾರಿಯನ್ನು ಠೇವಣಿಕೊಡುಗೆ ಯೋಜನೆಯಡಿ ಲೋಕೋಪಯೋಗಿ ಇಲಾಖಾ ವತಿಯಿಂದ ನಿರ್ವಹಿಸಲು ಮೊತ್ತವನ್ನು ಠೇವಣೀಕರಿಸಲಾಗಿದೆ. |
| | 1)ಲೋಕೋಪಯೋಗಿ ಇಲಾಖೆಯ ಅಧೀನ ರಸ್ತೆಗಳು | 3,250.00 | | |
| | 2)ಗ್ರಾಮ ಪಂಚಾಯತ್, ದೇವಸ್ಥಾನದ ಅಧೀನ ರಸ್ತೆಗಳು | 3,610.00 | | |
| | | **6,860.00** | | |
| 3. | ರಥ ಶೆಡ್ ನಿರ್ಮಾಣ | | 77.25 ಲಕ್ಷ | ಕಾಮಗಾರಿ ಪೂರ್ಣಗೊಂಡಿದೆ. |
| 4. | ಸಿಬ್ಬಂದಿ ವಸತಿಗೃಹಗಳಿಗೆ ಮೂರನೇ ಮಹಡಿ ನಿರ್ಮಾಣ. | | 98.50 ಲಕ್ಷ | ಕಾಮಗಾರಿ ಪೂರ್ಣಗೊಂಡಿದೆ. |
| 5. | ಯಾಗಶಾಲಾ ಕಟ್ಟಡಕ್ಕೆ ಸ್ಟೋರ್ ರೂಮ್ ನಿರ್ಮಿಸುವುದು. | | 35.50 ಲಕ್ಷ | ಕಾಮಗಾರಿ ಪೂರ್ಣಗೊಂಡಿದೆ. |
| 6. | ದರ್ಪಣತೀರ್ಥ ನದಿಗೆ ಕಿರುಸೇತುವೆ ನಿರ್ಮಾಣ. | | 99.00 ಲಕ್ಷ | ಕಾಮಗಾರಿ ಪೂರ್ಣಗೊಂಡಿದೆ. |
| 7. | ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಯ ಕುರಿತು. | | 2,560.00 ಲಕ್ಷ | ಕಾಮಗಾರಿ ಪೂರ್ಣಗೊಂಡಿದೆ. |
| 8. | ಪ್ರಥಮ ಹಂತದಲ್ಲಿ ನಿರ್ಮಿಸಿದ 184 ಕೊಠಡಿಗಳ ವಿ.ಐ.ಪಿ. ಅತಿಥಿಗೃಹಕ್ಕೆ ಪೀಠೋಪಕರಣ ಅಳವಡಿಸುವ ಬಗ್ಗೆ. | | 4.90ಕೋಟಿ | ಕಾಮಗಾರಿಯನ್ನು ಠೇವಣಿಕೊಡುಗೆ ಯೋಜನೆಯಡಿ ಲೋಕೋಪಯೋಗಿ ಇಲಾಖಾ ವತಿಯಿಂದ ನಿರ್ವಹಿಸಲು ಮೊತ್ತವನ್ನು ಠೇವಣೀಕರಿಸಲಾಗಿದೆ. |
| | | | **120,78,03,937.00** | |

ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ
ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಸುಬ್ರಹ್ಮಣ್ಯ, ಸುಳ್ಯ ತಾಲೂಕು, ದ.ಕ.